


## 'ಸುಧಾ'ಗೊಂದು ಸಿಹಿ ನಮಸ್ಕಾರ!

ಅತ್ಯಂತ ಕಿರಿಯ ವಯಸ್ಸಿಗೆ ನನ್ನನ್ನು ಲೇಖಕಿಯಾಗಿ ಮಾಡಿ ಬಹುಮಾನವನ್ನೂ ಕೊಟ್ಟು ಪ್ರೋತ್ಸಾಹವಿತ್ತ ಕೀರ್ತಿ 'ಸುಧಾ' ಪತ್ರಿಕೆಯದು!

ನಾನಾಗ ಹೈಸ್ಕೂಲಿನಲ್ಲಿದ್ದೆ. ಆ ಸಂದರ್ಭದಲ್ಲಿ 'ಸುಧಾ'ದ ಮಕ್ಕಳ ವಿಭಾಗದಲ್ಲಿ ಒಂದು ಆಹ್ವಾನ. ದೇಶಸೇವೆ ಮಾಡಿದ ಮಹನೀಯರ ಬಗ್ಗೆ ಕತೆ ಬರೆದು ಕಳಿಸಬೇಕೆಂದೂ ಸ್ಪರ್ಧೆಯಲ್ಲಿ ಆಯ್ಕೆಯಾದವರ ಕತೆಗಳನ್ನು 'ಸುಧಾ' ಪ್ರಕಟಿಸುವುದೆಂದೂ ಕರೆ ನೀಡಿದ್ದರು. ಇದು ಕತೆ ಬರೆಯಲು ನನ್ನನ್ನು ಪ್ರೇರೇಪಿಸಿತು. ಕತೆ ಬರೆಯುವುದೇನೋ ಸರಿ; ಆದರೆ ಕತೆಗೆ ವಿಷಯ? ಎರಡು ವರ್ಷಗಳ ಕೆಳಗೆ ನೆಚ್ಚಿನ ರಾಷ್ಟ್ರನಾಯಕ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ನಿಧನರಾಗಿದ್ದರು. ಆ ಸಂದರ್ಭದಲ್ಲಿ ವಾರ್ತೆಯನ್ನು ಬಿತ್ತರಿಸುವಾಗ ವಾರ್ತಾ ವಾಚಕರು ವಿಷಯವೊಂದನ್ನು ಹೇಳಿದ್ದರು. ಪುಟ್ಟ ಹುಡುಗನಾಗಿದ್ದಾಗ ಶಾಸ್ತ್ರೀಜಿ ಗಂಗೆಯನ್ನು ದಾಟಬೇಕಾದ ಸಂದರ್ಭ ಬಂದಿದ್ದು, ಕೈಯಲ್ಲಿ ಹಣವಿಲ್ಲದೆ, ಈಜಿಯೇ ನದಿಯನ್ನು ದಾಟಿಬಿಟ್ಟಿದ್ದರಂತೆ! ನನ್ನ ತಲೆಗೆ ಸುಳಿದದ್ದು ಈ ಸಂಗತಿ! ಅದನ್ನೇ ಪುಟ್ಟ ಕತೆಯಾಗಿ ಹೆಣೆದು 'ಸುಧಾ'ಗೆ ಕಳಿಸಿದೆ. ಕಥೆ ಪ್ರಕಟವಾಯಿತು. ನನ್ನ ಹಿಗ್ಗು ಹೇಳತೀರದು. ಎಲ್ಲರಿಗೂ ಸುಧಾ ತೋರಿಸಿದ್ದೇನು? ಬಗಲಲ್ಲಿ ಇಟ್ಟು ಮೆರೆದಿದ್ದೇನು? ಸಂತೋಷ ಅಷ್ಟಕ್ಕೆ ಮುಗಿಯಲಿಲ್ಲ. ಕೆಲವೇ ದಿನಗಳಲ್ಲಿ 'ಸುಧಾ'ದಿಂದ ಮನಿಯಾರ್ಡರು ಬಂದಿತು. ಹತ್ತು ರುಪಾಯಿ! ಸಂಭ್ರಮ ಮಿತಿ ಮೀರಿತು! ನನ್ನ ತಂದೆ 'ಮರೀ, ನಿನ್ನ ಬರವಣಿಗೆಗೆ ಸಂದ ಬಹುಮಾನ ಅದು. ಬರವಣಿಗೆಗೇ ಉಪಯೋಗಿಸಬೇಕು. ಆ ದುಡ್ಡನ್ನಿಲ್ಲಿ ತಾ. ಒಳ್ಳೆಯ ಪೆನ್ ತಂದು ಕೊಡುತ್ತೇನೆ' ಅಂತ ಪೇಟೆಗೆ ಹೋಗಿ ಒಂದು ನೀಲಿ ಬಣ್ಣದ ಸೊಗಸಾದ ಪೆನ್ನನ್ನು ತಂದುಕೊಟ್ಟರು.

ಆ ಅಧ್ಯಾಯ ಅಲ್ಲಿಗೆ ಮುಗಿಯಿತು. ಅಮ್ಮ ಬಯಸಿದಂತೆ ನಾನು ಬರವಣಿಗೆಯಲ್ಲಿ ತೊಡಗಿಕೊಂಡು ಬಿಡಲಿಲ್ಲ. ಆದರೆ ಅದಾವ ಯೋಗಾ ಯೋಗವೋ ಮುಂದೆ ನನ್ನ ನಲವತ್ತನೇ ವಯಸ್ಸಿನಲ್ಲಿ ಆಕಸ್ಮಿಕ ಪ್ರಸಂಗವೊಂದರಲ್ಲಿ ನಾನು ಲೇಖಕಿಯಾದೆ! ನನ್ನ ಮೊಟ್ಟಮೊದಲ ಕೃತಿ ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರ ಆತ್ಮಕಥನ. ಅದು 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ತುಂಬ ಜನಪ್ರಿಯತೆಯನ್ನೂ ಗಳಿಸಿತು. ಸ್ವತಃ ದೊರೆಸ್ವಾಮಿ ಅಯ್ಯಂಗಾರರಿಗೆ ಬಹಳ ಸಂತಸವನ್ನು ಕೊಟ್ಟಿತು. 'ಎಲ್ಲರೂ ಮೆಚ್ಚಿಕೊಳ್ಳೋರೇ ಕಣಮ್ಮ!' ಅಂತ ಕಣ್ಣರಳಿಸಿ ಹೇಳುತ್ತಿದ್ದರು. 'ಒಬ್ಬರು ಹಿರಿಯ ಚೇತನರಿಗೆ ಸಮಾಧಾನ– ಸಂತೃಪ್ತಿಗಳನ್ನು ಕೊಟ್ಟ ಗೌರವ 'ಸುಧಾ' ಪತ್ರಿಕೆಯದು. ಇದನ್ನು ನಂತರ ಮೈಸೂರಿನ ಗೀತಾ ಬುಕ್ ಹೌಸ್‌ನವರು ಪುಸ್ತಕ ರೂಪದಲ್ಲಿ ಸೊಗಸಾಗಿ ಹೊರತಂದರು.

ಅಂದಿನಿಂದ ಇಂದಿನವರೆಗೆ 'ಸುಧಾ'ದೊಂದಿಗೆ ನನ್ನ ಬಾಂಧವ್ಯ ಮುಂದುವರಿದಿದೆ. ನನಗೆ ಪ್ರೀತಿ ಪ್ರೋತ್ಸಾಹಗಳನ್ನು ಕೊಟ್ಟಿರುವ 'ಸುಧಾ' ಪತ್ರಿಕೆಗೆ ಹುಟ್ಟುಹಬ್ಬದ ಸಂದರ್ಭದಲ್ಲಿ ಆದರಪೂರ್ವಕ ಶುಭಾಶಯ. ಪತ್ರಿಕೆಯ ಯಶಸ್ಸು ನಿರಂತರವಾಗಿರಲಿ.

-ಭಾರತೀ ಕಾಸರಗೋಡು

## ಏಕಾಗ್ರತೆ... ಸಾಧನೆಗೆ ಮೆಟ್ಟಿಲು!

**ಸೂಫಿ ಕಥೆ**

ಒಬ್ಬ ಯುವಕ ರೂಮಿಯವರ ಹತ್ತಿರ ಉಪದೇಶ ಪಡೆಯುತ್ತಿದ್ದ. ಆಗ ಅಲ್ಲಿಗೆ ಬಂದ ಧನವಂತರೊಬ್ಬರು ರೂಮಿಗೆ ವಂದಿಸಿ, 'ನಾನು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂದಿದ್ದೇನೆ. ಮಧ್ಯ ವಯಸ್ಕ ನಾಗಿರುವ ನಾನು ಈವರೆಗೆ ಏನೂ ಸಾಧಿಸಲಿಲ್ಲ. ನನ್ನ ಹತ್ತಿರ ಸಾಕಷ್ಟು ಐಶ್ವರ್ಯ ಇದೆ. ನನಗೆ ನೀವೇ ಮಾರ್ಗದರ್ಶನ ಮಾಡಬೇಕು' ಎಂದು ನಮ್ರತೆಯಿಂದ ಪ್ರಾರ್ಥಿಸಿದನು. ಅದಕ್ಕೆ ರೂಮಿ, ಸಂಗೀತ, ಸಾಹಿತ್ಯ, ಶಿಲ್ಪಕಲೆ, ಚಿತ್ರಕಲೆ... ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಕಷ್ಟು ಸಾಧ್ಯತೆಗಳಿವೆ ಎಂದು ಸೂಚಿಸಿದರು.

'ಅದನ್ನೆಲ್ಲ ಪ್ರಯತ್ನಿಸಿ ವಿಫಲನಾದ ಮೇಲೆಯೇ ನಿಮ್ಮ ನೆರವನ್ನು ಬಯಸಿ ಬಂದಿದ್ದೇನೆ' ಎಂದು ಉತ್ತರಿಸಿದರು ಆ ಶ್ರೀಮಂತರು. ರೂಮಿ ಇದಕ್ಕೆ ಏನೂ ಉತ್ತರ ಕೊಡಲಿಲ್ಲ. ಕೈ ಸಂಜ್ಞೆಯಿಂದ ತನ್ನನ್ನು ಹಿಂಬಾಲಿಸುವಂತೆ ಹೇಳಿ, ಮನೆಯ ಹಿಂಭಾಗಕ್ಕೆ ಹೋದರು.

ಅಲ್ಲಿ ದೊಡ್ಡ ಖಾಲಿ ಜಾಗ ಇತ್ತು. ಅದರಲ್ಲಿ ಒಂದೂವರೆ ಅಡಿ, ಎರಡು ಅಡಿ ಆಳವಿರುವ ಹಲವಾರು ಗುಂಡಿಗಳು ಅಗೆಯಲ್ಪಟ್ಟಿದ್ದವು. ರೂಮಿ, 'ಇಲ್ಲಿ ನೀರಿಗೆ ತುಂಬಾ ಅಭಾವವಿದೆ. ಅದಕ್ಕೆ ನನ್ನ ಶಿಷ್ಯರನ್ನು ಬಾವಿ ತೋಡಲು ಹೇಳಿದೆ ನೋಡಿ! ಒಂದರಲ್ಲಾದರೂ ನೀರು ಬರಲಿಲ್ಲ' ಎಂದು ಹೇಳಿದರು. ಧನವಂತರು, 'ನಾನು ನಿಮ್ಮನ್ನು ದೊಡ್ಡ ವಿದ್ವಾನ್ ಎಂದು ತಿಳಿದಿದ್ದೆ. ಬಾವಿ ತೋಡಬೇಕೆಂದರೆ ಒಂದೇ ಜಾಗದಲ್ಲಿ 60–70 ಅಡಿ ಆಳ ತೋಡಬೇಕು. ಒಂದೋ ಎರಡೋ ಅಡಿಗಳಲ್ಲ' ಎಂದು ಹೇಳಿ ನಗೆಯಾಡಿದರು.

ಅದಕ್ಕೆ ರೂಮಿ, 'ನಿಮ್ಮ ಸಮಸ್ಯೆ ಏನೆಂದು ಈಗ ಸುಳುಹು ಸಿಕ್ಕಿತಲ್ಲಾ! ಹಲವು ವಿಷಯಗಳಲ್ಲಿ ಆಸಕ್ತಿ ಇದ್ದರೂ ಸಾಧನೆ ಮಾಡುವವರು ಯಾವುದಾದರೂ ಒಂದು ಕ್ಷೇತ್ರವನ್ನು ಆರಿಸಿಕೊಂಡು, ಅದಕ್ಕೆ ತಮ್ಮ ಪೂರ್ಣ ಶಕ್ತಿಯನ್ನು ಅರ್ಪಣೆ ಮಾಡಬೇಕು, ಇದನ್ನು ಒಂದು ತಪಸ್ಸಿನಂತೆ ಮಾಡಿದರೆ ನಿಮ್ಮ ಆಯ್ದ ಕ್ಷೇತ್ರದಲ್ಲಿ ನೀವು ಪ್ರಕಾಶಿಸುವುದು ಖಂಡಿತ!' ಎಂದು ವಿವರಿಸಿದರು. ಧನವಂತರಿಗೂ ದಾರಿ ಕಾಣಿಸಿತು.

-ಕೆ. ನಿರುಪಮಾ, ಪುಣೆ




**ಶ್ರೀ ವೈಷ್ಣವೀ ದೇವಿ ಜ್ಯೋತಿಷ್ಯ ಕೇಂದ್ರದ ಪಂಡಿತ್ ಶ್ರೀ ರಾಮಕೃಷ್ಣ ಶರ್ಮಾರವರಿಗೆ ನನ್ನ ಕೃತಜ್ಞತೆಗಳು.**

ನಾನು ಸುಮಾ ದಿವಾಕರ ಶೆಟ್ಟಿ, ನಮ್ಮ ಯಜಮಾನ್ರು 5 ವರ್ಷದಿಂದ ಬಿಜಿನೆಸ್‌ನಲ್ಲಿ ತುಂಬಾ ನಷ್ಟ ಮಾಡಿಕೊಂಡಿದ್ದರು. ಮೈ ತುಂಬಾ ಸಾಲ ಸಹ ಆಗಿತ್ತು ಮತ್ತು ನಮ್ಮ ಮನೆಯಲ್ಲಿ ಎಲ್ಲರಿಗೂ ಅನಾರೋಗ್ಯದಿಂದ ತುಂಬಾ ತೊಂದರೆ ಇತ್ತು. ಎಷ್ಟೋ ಡಾಕ್ಟರ್ ಹತ್ತಿರ ತೋರಿಸಿದರೂ ಗುಣ ಆಗ್ತಾ ಇರಲಿಲ್ಲ. ನಮ್ಮ 2 ಮಕ್ಕಳು 2 ವರ್ಷದಿಂದ ವಿದ್ಯೆಯಲ್ಲಿ ತುಂಬಾ ಹಿಂದೆ ಇದ್ರು. ಮನೆಯಲ್ಲಿ ಯಾವಾಗಲೂ ಜಗಳ ಸುಖ. ಸಂತೋಷ ನೆಮ್ಮದಿನೇ ಕಳೆದುಕೊಂಡಿದ್ವಿ, ಇದರ ಪರಿಹಾರಕ್ಕಾಗಿ ಹೋಗದ ಇರುವ ದೇವಸ್ಥಾನಗಳಿಲ್ಲ, ಮತ್ತು ದೊಡ್ಡ ದೊಡ್ಡ ಜ್ಯೋತಿಷ್ಯರನ್ನು ಸಹ ಭೇಟಿ ಮಾಡಿದೆವು. ಆದರೆ ಯಾರಿಂದಲೂ ನಮ್ಮ ಸಮಸ್ಯೆಗಳಿಗೆ ಪರಿಹಾರನೇ ಸಿಗಲಿಲ್ಲ. ಕೊನೆಗೆ ಒಂದು ದಿನ, ನನ್ನ ಆಪ್ತ ಸ್ನೇಹಿತೆ, ವಿಮಲಾರಾವ್‌ರವರು ಮಂಗಳೂರಿನಲ್ಲಿರುವ ಶ್ರೀ ವೈಷ್ಣವೀ ದೇವಿ ಜ್ಯೋತಿಷ್ಯ ಕೇಂದ್ರ ಸಂ.ಶ್ರೀ ರಾಮಕೃಷ್ಣ ಶರ್ಮಾರವರನ್ನು ಭೇಟಿಯಾಗಿ 100% ನಿಮ್ಮ ಸಮಸ್ಯೆಗೆ ಪರಿಹಾರ ಸಿಗುತ್ತೆ ಅನ್ನುವ ಭರವಸೆ ಕೊಟ್ಟರು. ಆ ಭರವಸೆಯ ಮೇರೆಗೆ ಕೊನೆಯದಾಗಿ ಅವರೊನ್ನೊಮ್ಮೆ ಭೇಟಿ ಮಾಡಿದೆವು. ಗುರೂಜಿಯವರು ನಮ್ಮ ಸಮಸ್ಯೆಗಳನ್ನೆಲ್ಲಾ ಶೋಧನೆ ಮಾಡಿ ದೇವಿಯ ಆರಾಧನೆ ಹಾಗೂ ಪೂಜೆಯನ್ನು ಮಾಡಿ ಕೆಲವು ಕವಚಗಳನ್ನು ಮನೆಯಲ್ಲಿ ಇಟ್ಟು ಪೂಜೆ ಮಾಡಲಿಕ್ಕೆ ಕೊಟ್ರು. ಅವರು ಹೇಳಿದ ಹಾಗೆ ನಾವು ಪಾಲನೆ ಮಾಡ್ತಾ ಇದ್ದೇವೆ. ನಿಜವಾಗಿಯೂ ಹೇಳಬೇಕೆಂದರೆ ಈ 6–7 ತಿಂಗಳಿನಿಂದ ನಮ್ಮ ಯಜಮಾನರ ಬಿಜಿನೆಸ್‌ನಲ್ಲಿ ತುಂಬಾ ಅಭಿವೃದ್ಧಿ ಆಗಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ, ನಮ್ಮೆಲ್ಲರ ಆರೋಗ್ಯದಲ್ಲಿ ತುಂಬಾ ಒಳ್ಳೆಯದಾಗಿದೆ, ಮನೆಯಲ್ಲಿ ಸುಖ ಸಂತೋಷ ನೆಮ್ಮದಿಯಿಂದ ಇದ್ದೇವೆ. ನನ್ನ ಸ್ನೇಹಿತೆ ವಿಮಲಾರಾವ್ ಹೇಳಿದ ಹಾಗೆ 100% ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ. ಕತ್ತಲಾದ ಬದುಕಿಗೆ ಬೆಳಕನ್ನು ನೀಡಿ ನೆಮ್ಮದಿಯ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಪಂ.ಶ್ರೀ ರಾಮಕೃಷ್ಣ ಶರ್ಮಾರವರಿಗೆ ನನ್ನ ಹಾಗೂ ನನ್ನ ಕುಟುಂಬ ವರ್ಗದವರಿಂದ ಹೃದಯಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತಿದ್ದೇನೆ. ನೀವೂ ಸಹ ನಮ್ಮಂತೆಯೇ ಯಾವುದೇ ಕಠಿಣ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಅವಶ್ಯವಾಗಿ ಇವರನ್ನೊಮ್ಮೆ ಭೇಟಿ ಮಾಡಿ 100% ನಿಮ್ಮ ಸಮಸ್ಯೆಗೆ ಪರಿಹಾರ ಸಿಗುತ್ತದೆ.



ಜ್ಯೋತಿಷ್ಯರನ್ನು ಭೇಟಿಯಾಗುವ ವಿಳಾಸ : (ಹುಬ್ಬಳ್ಳಿ ಹಾಗೂ ಬೆಂಗಳೂರಿನಲ್ಲೂ ಸಹ ಭೇಟಿಯಾಗಬಹುದು.)
ಶ್ರೀ ವೈಷ್ಣವೀ ದೇವಿ ಜ್ಯೋತಿಷ್ಯ ಕೇಂದ್ರ , ಪಂ.ಶ್ರೀ. ರಾಮಕೃಷ್ಣ ಶರ್ಮ
ಮನೆ: ಮಲ್ಲಿಕಾ ಅಪಾರ್ಟ್‌ಮೆಂಟ್, ಅತ್ತಾವರ ಕಟ್ಟೆ ಹತ್ತಿರ ಶಂಕರ ವಿಠಲ ಮೋಟಾರ್ಸ್ ಎದುರು,
ಅತ್ತಾವರ, ಮಂಗಳೂರು. 9902211104 0824 - 4271104

ಇಂತಿ ನಿಮ್ಮ ವಿಶ್ವಾಸಿ
ಸುಮಾದಿವಾಕರ್ ಶೆಟ್ಟಿ
ಅಂಕೋಲ ತಾಲೂಕು,
ಕಾರವಾರ ಜಿಲ್ಲೆ,

